# 1999

# LAW

## Paper 1

*Time : 3 Hours]* *[Maximum Marks : 300*

### *INSTRUCTIONS*

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt questions **1** and **5** which are compulsory, and any **three** of the remaining questions, selecting at least **one** question from each Section.*

*All questions carry equal marks.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

[Turn over

## SECTION A

1. Answer any ***three*** of the following (each answer should be in about 200 words) :

   (a) What are the salient features of the 73rd Amendment Act, 1992 ? Do you think the decentralisation of powers to the local self-governing bodies has fundamentally altered the scheme of federalism embodied in the Constitution of India ?

   (b) The State Service Commission allots one-third of the total marks for the *viva voce* test and personal interview. In the context of the Art. 14 of the Constitution of India discuss the validity of the Service Commission action.

   (c) Discuss the scope and ambit of Freedom of Speech and Expression as enshrined in Art. 19(1)(a) of the Constitution. Comment on the constitutionality of censorship regulations as applied to exhibition of films on T.V. in the light of decided cases.

   (d) Discuss the nature, scope and interpretation of 'equal pay for equal work' principle under Article 39(d) and the 'right to work' under Article 41 of the Directive Principles of State Policy in the Constitution. Explain the implications of making them Fundamental Rights under Part III of the Constitution in the light of the relationship between Part III and Part IV.

2. (a) Discuss the justiciability of constitutional amendments affecting Fundamental Rights with the help of leading Supreme Court judgements.

   (b) Is hanging by neck a valid and constitutionally permissible mode of execution of a death sentence ?

3. (a) Discuss the scope and ambit of Freedom of Religion and Conscience as recognised in the Indian Constitution drawing attention to the powers and authority vested in the State to regulate matters which affect the practice of religion.

   (i) The Police Commissioner of Calcutta issued orders prohibiting the performance in public of *Tandava* dance by Ananda Margis. Is the ban constitutional ?

## ವಿಭಾಗ A

1. ಈ ಕೆಳಗಿನ ಯಾವುದಾದರೂ ಮೂರರ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ. ಪ್ರತಿಯೊಂದರ ಉತ್ತರ 200 ಪದಗಳನ್ನು ಮೀರದಿರಲಿ :

   (ಎ) 73ನೆಯ ತಿದ್ದುಪಡಿ ಅಧಿನಿಯಮ, 1992ರ ಪ್ರಮುಖ ಅಂಶಗಳು ಯಾವುವು ? ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ಮಾಡಲಾದ ಅಧಿಕಾರಗಳ ವಿಕೇಂದ್ರೀಕರಣವು ಭಾರತ ಸಂವಿಧಾನದಲ್ಲಿ ಅಡಕವಾಗಿರುವ ಸಂಯುಕ್ತ ರಾಷ್ಟ್ರ ತತ್ವವನ್ನು ಮೂಲಭೂತವಾಗಿ ಬದಲಾಯಿಸಿದೆಯೆಂದು ನೀವು ಭಾವಿಸುವಿರಾ ?

   (ಬಿ) ರಾಜ್ಯ ಸೇವಾ ಆಯೋಗವು ಒಟ್ಟು ಅಂಕಗಳ ಪೈಕಿ ಮೂರನೆಯ ಒಂದರಷ್ಟು ಅಂಕಗಳನ್ನು ಮೌಖಿಕ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನಕ್ಕೆ ಹಂಚಿಕೆ ಮಾಡುತ್ತದೆ. ಸೇವಾ ಆಯೋಗದ ಈ ಕ್ರಮದ ಸಿಂಧುತ್ವವನ್ನು ಭಾರತ ಸಂವಿಧಾನದ 14ನೆಯ ಅನುಚ್ಛೇದದ ಹಿನ್ನೆಲೆಯಲ್ಲಿ ಚರ್ಚಿಸಿ.

   (ಸಿ) ಸಂವಿಧಾನದ ಅನುಚ್ಛೇದ 19(1)(ಎ) ರಲ್ಲಿ ಹೇಳಲಾದಂತೆ ವಾಕ್‌ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ವ್ಯಾಪ್ತಿ ಮತ್ತು ಮಿತಿ ಕುರಿತು ಚರ್ಚಿಸಿ. ದೂರದರ್ಶನದಲ್ಲಿ ಚಲನಚಿತ್ರಗಳ ಪ್ರದರ್ಶನಕ್ಕೆ ಅನ್ವಯಿಸುವಂತೆ ಸೆನ್ಸಾರ್‌ಷಿಪ್ ನಿಬಂಧನೆಗಳ ಸಂವಿಧಾನಬದ್ಧತೆಯನ್ನು ನಿರ್ಣಯಿಸಲಾದ ಪ್ರಕರಣಗಳ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಿ.

   (ಡಿ) ಸಂವಿಧಾನದಲ್ಲಿ ಹೇಳಲಾದ ರಾಜ್ಯ ನೀತಿ ನಿರ್ದೇಶನಾತ್ಮಕ ತತ್ವಗಳ ಅನುಚ್ಛೇದ 39(ಡಿ) ಅಡಿ 'ಸಮಾನ ಕೆಲಸಕ್ಕೆ ಸಮಾನ ವೇತನ' ತತ್ವದ ಮತ್ತು ಅನುಚ್ಛೇದ 41ರಡಿ 'ಕೆಲಸಮಾಡುವ ಹಕ್ಕು' ತತ್ವದ ಸ್ವರೂಪ, ವ್ಯಾಪ್ತಿ ಮತ್ತು ಅರ್ಥ ವಿವರಣೆ ಕುರಿತು ಚರ್ಚಿಸಿ ಮತ್ತು ಅವುಗಳನ್ನು ಸಂವಿಧಾನದ III ನೆಯ ಭಾಗದಡಿ ಮೂಲಭೂತ ಹಕ್ಕುಗಳನ್ನಾಗಿ ಮಾಡುವುದರ ಪರಿಣಾಮಗಳನ್ನು ಭಾಗ III ಮತ್ತು ಭಾಗ IV ರ ನಡುವಿನ ಸಂಬಂಧದ ಹಿನ್ನೆಲೆಯಲ್ಲಿ ವಿವರಿಸಿ.

2. (ಎ) ಮೂಲಭೂತ ಹಕ್ಕುಗಳಿಗೆ ಬಾಧಕವಾಗುವ ಸಂವಿಧಾನ ತಿದ್ದುಪಡಿಗಳ ನ್ಯಾಯೋಚಿತತೆಯನ್ನು ಸರ್ವೋಚ್ಚ ನ್ಯಾಯಾಲಯದ ಪ್ರಮುಖ ತೀರ್ಪುಗಳ ನೆರವಿನೊಂದಿಗೆ ಚರ್ಚಿಸಿ.

   (ಬಿ) ಕತ್ತಿಗೆ ನೇಣು ಹಾಕುವ ಕ್ರಮವು ಮರಣದಂಡನೆ ಶಿಕ್ಷೆಯನ್ನು ಜಾರಿಗೊಳಿಸುವ ಕ್ರಮಬದ್ಧ ಮತ್ತು ಸಂವಿಧಾನಾತ್ಮಕ ಎಂದು ಅನುಮತಿಸತಕ್ಕ ಕ್ರಮವೆ ?

3. (ಎ) ಭಾರತ ಸಂವಿಧಾನದಲ್ಲಿ ಮಾನ್ಯಮಾಡಿರುವಂತೆ ಧಾರ್ಮಿಕ ಸ್ವಾತಂತ್ರ್ಯ ಮತ್ತು ಆತ್ಮಸಾಕ್ಷಿಯ ವ್ಯಾಪ್ತಿ ಮತ್ತು ಪರಿಮಿತಿ ಕುರಿತು, ಧರ್ಮದ ಆಚರಣೆಗೆ ಬಾಧಕವಾಗುವ ವಿಷಯಗಳನ್ನು ನಿಯಂತ್ರಿಸಲು ರಾಜ್ಯದಲ್ಲಿ ನಿಹಿತವಾದ ಅಧಿಕಾರಗಳು ಮತ್ತು ಪ್ರಾಧಿಕಾರದ ಕಡೆ ಗಮನ ನೀಡುತ್ತ ಚರ್ಚಿಸಿ.

   (i) ಕಲಕತ್ತಾ ಪೊಲೀಸ್ ಕಮೀಷನರರು, ಆನಂದಮಾರ್ಗಿಗಳು ಸಾರ್ವಜನಿಕವಾಗಿ ತಾಂಡವ ನೃತ್ಯ ಪ್ರದರ್ಶಿಸುವುದನ್ನು ನಿಷೇಧಿಸಿ ಆದೇಶ ಹೊರಡಿಸಿದರು. ಈ ನಿಷೇಧ ಸಂವಿಧಾನಬದ್ಧವೆ ?

[Turn over

(ii) The Police Commissioner of Bombay issues orders prohibiting street congregations on public roads for the purpose of holding *Namaz* or *Maha Aaratis*. Is the order valid and constitutional ?

(b) Discuss the constitutional status of the President of India. Compare it with that of the President of USA and the English Monarch.

4. Answer any ***two*** of the following :

(a) "The framers of the Indian Constitution were fully conscious of the transformation of 'classical federalism' into a dynamic process of co-operative action and shared responsibility between the Federal and State Governments."

To what extent is this perceived transformation in the federal concept reflected in the provisions of the Indian Constitution ? Do you consider that with the coalition governments assuming power at the Centre in the recent past, the Federal mechanism as envisaged by the founding fathers has become an instrument of true co-operative federalism ?

(b) 'Trade, commerce and intercourse throughout the territory of India shall be free.' — Is a state competent to bar the transport of essential commodities out of the state ? Refer to decided cases.

(c) Critically evaluate the role of the Governor under the Indian Constitution in the light of the Sarkaria Committee's recommendations. Argue under what circumstances a Governor can be removed from office by the President. The available precedents in this area do not justify the optimism that the constitutional norms that fetter the President's pleasure are not ignored. Comment.

(ii) ಮುಂಬಯಿಯ ಪೊಲೀಸ್ ಕಮೀಷನರರು, ನಮಾಜ್ ಅಥವಾ ಮುಷಾಯಿರ ಮಾಡುವ ಉದ್ದೇಶಕ್ಕಾಗಿ ಸಾರ್ವಜನಿಕ ರಸ್ತೆಗಳಲ್ಲಿ ಗುಂಪುಗೂಡುವುದನ್ನು ನಿಷೇಧಿಸಿ ಆದೇಶ ಹೊರಡಿಸಿದರು. ಸದರಿ ಆದೇಶವು ಕ್ರಮಬದ್ಧ ಮತ್ತು ಸಂವಿಧಾನಾತ್ಮಕವಾದುದೆ ?

(ಬಿ) ಭಾರತದ ರಾಷ್ಟ್ರಾಧ್ಯಕ್ಷರ ಸಂವಿಧಾನಾತ್ಮಕ ಸ್ಥಾನಮಾನ ಕುರಿತು ಚರ್ಚಿಸಿರಿ ಮತ್ತು ಅದನ್ನು ಯು.ಎಸ್.ಎ. ಅಧ್ಯಕ್ಷ ಹಾಗೂ ಇಂಗ್ಲಂಡಿನ ಅರಸರೊಂದಿಗೆ ಹೋಲಿಸಿ.

4. ಯಾವುದಾದರೂ **ಎರಡಕ್ಕೆ** ಉತ್ತರಿಸಿ :

(ಎ) "ಭಾರತ ಸಂವಿಧಾನದ ಕರ್ತೃಗಳು, ಶ್ರೇಷ್ಠ ಸಂಯುಕ್ತರಾಷ್ಟ್ರ ತತ್ವವನ್ನು ಸರಕಾರ ಕ್ರಮದ ಕ್ರಿಯಾಶೀಲ ವ್ಯವಸ್ಥೆಯಾಗಿ ಮಾರ್ಪಡಿಸುವುದರ ಬಗ್ಗೆ ಸಾಕಷ್ಟು ತಿಳಿದಿದ್ದರು ಮತ್ತು ಹೊಣೆಗಾರಿಕೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಹಂಚಿಕೆ ಮಾಡಿದರು."

ಸಂಯುಕ್ತರಾಷ್ಟ್ರ ಪರಿಕಲ್ಪನೆಯಲ್ಲಿನ ಈ ಗ್ರಹಿತ ವರ್ಗಾವಣೆಯು ಭಾರತ ಸಂವಿಧಾನದ ಉಪಬಂಧಗಳಲ್ಲಿ ಎಷ್ಟರಮಟ್ಟಿಗೆ ಪ್ರತಿಬಿಂಬಿತವಾಗಿದೆ ? ಇತ್ತೀಚೆಗೆ ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರಗಳು ಅಧಿಕಾರ ವಹಿಸಿಕೊಂಡಿರುವುದರಿಂದ ಸಂವಿಧಾನದ ಕರ್ತೃಗಳು ಆಲೋಚಿಸಿದಂಥ ಸಂಯುಕ್ತರಾಷ್ಟ್ರ ಕಾರ್ಯನಿರ್ವಹಣಾತಂತ್ರವು, ನಿಜವಾದ ಅರ್ಥದಲ್ಲಿ ಸಹಕಾರ ಸಂಯುಕ್ತರಾಷ್ಟ್ರ ತತ್ವದ ಸಾಧನವಾಗಿ ಪರಿಣಮಿಸಿದೆಯೇ ?

(ಬಿ) ಭಾರತ ರಾಜ್ಯಕ್ಷೇತ್ರದಾದ್ಯಂತ ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರವು ಮುಕ್ತವಾಗಿರತಕ್ಕದ್ದು. ಅತ್ಯಾವಶ್ಯಕ ಸರಕುಗಳನ್ನು ರಾಜ್ಯದ ಹೊರಗೆ ಸಾಗಿಸುವುದನ್ನು ನಿಷೇಧಿಸಲು ರಾಜ್ಯ ಸಕ್ಷಮವಾಗಿದೆಯೆ ? ನಿರ್ಣೀತ ಕಾನೂನುಗಳನ್ನು ಉಲ್ಲೇಖಿಸಿ.

(ಸಿ) "ಸರ್ಕಾರಿಯಾ ಆಯೋಗದ ಶಿಫಾರಸುಗಳ ಹಿನ್ನೆಲೆಯಲ್ಲಿ ಭಾರತ ಸಂವಿಧಾನದಡಿ ರಾಜ್ಯಪಾಲರ ಪಾತ್ರವನ್ನು ವಿಮರ್ಶಾತ್ಮಕವಾಗಿ ನಿರೂಪಿಸಿ. ರಾಷ್ಟ್ರಪತಿಯವರು ಯಾವ ಸಂದರ್ಭದಲ್ಲಿ ರಾಜ್ಯಪಾಲರನ್ನು ಪದಚ್ಯುತಗೊಳಿಸಬಹುದೆಂಬುದನ್ನು ಪ್ರತಿಪಾದಿಸಿ. ಈ ಸಂಬಂಧದಲ್ಲಿ ಲಭ್ಯವಿರುವ ಪೂರ್ವ ನಿದರ್ಶನಗಳು, ರಾಷ್ಟ್ರಪತಿಯವರ ಇಷ್ಟವನ್ನು ನಿರ್ಬಂಧಪಡಿಸುವ ಸಂವಿಧಾನಾತ್ಮಕ ನಿಬಂಧನೆಗಳನ್ನು ಕಡೆಗಣಿಸಿಲ್ಲ ಎಂಬ ಆಶಾವಾದವನ್ನು ಸಮರ್ಥಿಸುತ್ತಿಲ್ಲ." – ವ್ಯಾಖ್ಯಾನಿಸಿ.

## SECTION B

5. Answer any ***three*** of the following (each answer should be in about 200 words) :

   (a) Under Article 51(C) of the Indian Constitution, the State is enjoined to foster respect for International law and treaty obligations. To what extent, in your assessment, have Courts in India effectively contributed to the realisation of this constitutional objective ?

   (b) What are the leading theories as to the relationship of International law and Municipal law ? Prof. O'Connell appears to give the most balanced estimate of the legal position in this respect. Comment.

   (c) Assess the contribution of the International Court of Justice to the development of International law with the help of any two recent landmark judgements of the Court.

   (d) Examine custom as a source of International law.

6. (a) Discuss, with the help of the law as it stands codified in the Vienna Conventions on the Law of Treaties, the leading principles of treaty interpretation.

   The Security Council has, by a Resolution under Chapter VII of the UN Charter, set up an International War Crimes Tribunal. State A, a member of UN is directed by the Tribunal to surrender an offender who is known to be in State A to answer charges of war crimes before the tribunal. State A refuses to comply with the directive and contends that

   (i) there is no extradition treaty between it and State B where the Tribunal has its seat;

   (ii) under customary International law, read with relevant provisions of a War Crimes Act passed by State A, the offences in question are triable in the courts of State A. Examine the issues of treaty interpretation presented by the problem.

## ವಿಭಾಗ B

5. ಈ ಕೆಳಗಿನ ಯಾವುದಾದರೂ ಮೂರರ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ; ಪ್ರತಿಯೊಂದರ ಉತ್ತರ 200 ಪದಗಳನ್ನು ಮೀರದಿರಲಿ :

(ಎ) ಭಾರತ ಸಂವಿಧಾನದ 51(ಸಿ) ಅನುಚ್ಛೇದದಡಿ ರಾಜ್ಯವು ಅಂತರರಾಷ್ಟ್ರೀಯ ಕಾನೂನು ಮತ್ತು ಒಪ್ಪಂದದ ಹೊಣೆಗಾರಿಕೆಗಳನ್ನು ಗೌರವಿಸಲು ಬದ್ಧವಾಗಿರುತ್ತದೆ. ಭಾರತದಲ್ಲಿನ ನ್ಯಾಯಾಲಯಗಳು ಈ ಸಂವಿಧಾನಾತ್ಮಕ ಉದ್ದೇಶವನ್ನು ಮನವರಿಕೆ ಮಾಡಿ ಕೊಳ್ಳುವಲ್ಲಿ, ನಿಮ್ಮ ಅಭಿಪ್ರಾಯದಲ್ಲಿ, ಎಷ್ಟರಮಟ್ಟಿಗೆ ತಮ್ಮ ಕೊಡುಗೆಯನ್ನು ನೀಡಿವೆ ?

(ಬಿ) "ಅಂತರರಾಷ್ಟ್ರೀಯ ಕಾನೂನು ಮತ್ತು ಮುನಿಸಿಪಲ್ ಕಾನೂನು ಸಂಬಂಧ ಕುರಿತಂತೆ ಪ್ರಮುಖ ತತ್ವಗಳು ಯಾವುವು ? ಪ್ರೊ. ಒಕೊನೆಲ್ ಅವರು ಈ ಸಂಬಂಧದಲ್ಲಿ ಕಾನೂನು ಸ್ಥಿತಿಯ ಅತ್ಯಂತ ಸಮತೋಲನದ ಅಂದಾಜನ್ನು ಕೊಟ್ಟಿರುವುದು ಕಂಡುಬರುತ್ತದೆ." – ವ್ಯಾಖ್ಯಾನಿಸಿ.

(ಸಿ) ಅಂತರರಾಷ್ಟ್ರೀಯ ಕಾನೂನಿನ ಅಭಿವೃದ್ಧಿಗೆ ಅಂತರರಾಷ್ಟ್ರೀಯ ನ್ಯಾಯಾಲಯದ ಕೊಡುಗೆಯನ್ನು ನ್ಯಾಯಾಲಯದ ಯಾವುದಾದರೂ ಎರಡು ಇತ್ತೀಚಿನ ಪ್ರಮುಖ ತೀರ್ಪುಗಳ ನೆರವಿನೊಂದಿಗೆ ನಿರ್ಧರಿಸಿ.

(ಡಿ) ರೂಢಿಯನ್ನು ಅಂತರರಾಷ್ಟ್ರೀಯ ಕಾನೂನಿನ ಆಧಾರವಾಗಿ ಪರಿಶೀಲಿಸಿ.

6. (ಎ) ಒಪ್ಪಂದದ ಕಾನೂನಿನ ಬಗ್ಗೆ ವಿಯೆನ್ನಾ ಸಮಾವೇಶದಲ್ಲಿ ಕ್ರೋಢೀಕೃತವಾದ ಕಾನೂನಿನ ನೆರವಿನೊಂದಿಗೆ ಒಪ್ಪಂದ ವ್ಯಾಖ್ಯಾನಗಳ ಮುಖ್ಯ ತತ್ವಗಳ ಬಗ್ಗೆ ಚರ್ಚಿಸಿ.

ಭದ್ರತಾ ಸಮಿತಿಯು, ಯು.ಎನ್. ಚಾರ್ಟರಿನ VIIನೆಯ ಅಧ್ಯಾಯದಡಿ ಕೈಗೊಂಡ ನಿರ್ಣಯದ ಮೂಲಕ ಅಂತರರಾಷ್ಟ್ರೀಯ ಯುದ್ಧ ಅಪರಾಧಗಳ ನ್ಯಾಯಮಂಡಲಿಯನ್ನು ಸ್ಥಾಪಿಸಿತು. 'ಎ' ರಾಜ್ಯದಲ್ಲಿ ಇರುವನೆಂದು ತಿಳಿದುಬಂದಿರುವ ಅಪರಾಧಿಯೊಬ್ಬನನ್ನು ನ್ಯಾಯಮಂಡಲಿಯ ಮುಂದೆ ಯುದ್ಧ ಅಪರಾಧ ಆರೋಪಗಳ ಬಗ್ಗೆ ಉತ್ತರಿಸಲು ಒಪ್ಪಿಸುವಂತೆ ನ್ಯಾಯಮಂಡಲಿಯು ಯು.ಎನ್. ಸದಸ್ಯರಾಜ್ಯ 'ಎ'ಗೆ ನಿರ್ದೇಶಿಸಿತು. 'ಎ' ರಾಜ್ಯವು ಆ ನಿರ್ದೇಶನವನ್ನು ಪಾಲಿಸಲು ತಿರಸ್ಕರಿಸಿತು ಮತ್ತು ಈ ರೀತಿ ಪ್ರತಿಪಾದಿಸಿತು :

(i) ತನ್ನ ಮತ್ತು ನ್ಯಾಯಮಂಡಲಿಯಲ್ಲಿ ಸೀಟನ್ನು ಹೊಂದಿರುವ ಬಿ ರಾಜ್ಯದ ನಡುವೆ ಅಪರಾಧಿಗಳನ್ನು ಪರಸ್ಪರ ಒಪ್ಪಿಸುವ ಯಾವುದೇ ಒಪ್ಪಂದ ಇಲ್ಲ.

(ii) 'ಎ' ರಾಜ್ಯವು ಅಂಗೀಕರಿಸಿದ ಯುದ್ಧ ಅಪರಾಧಗಳ ಅಧಿನಿಯಮಕ್ಕೆ ಸಂಬಂಧಪಟ್ಟ ಉಪಬಂಧಗಳೊಂದಿಗೆ ಓದಲಾದ ರೂಢಿಗತ ಅಂತರರಾಷ್ಟ್ರೀಯ ಕಾನೂನಿನ ಮೇರೆಗೆ ಪ್ರಶ್ನಿತ ಅಪರಾಧಗಳನ್ನು 'ಎ' ರಾಜ್ಯದ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಒಳಪಡಿಸಬಹುದಾಗಿದೆ.

ಈ ಸಮಸ್ಯೆಯಿಂದ ಉದ್ಭವಿಸಿದ ಒಪ್ಪಂದ ವ್ಯಾಖ್ಯಾನದ ವಿವಾದಾಂಶಗಳನ್ನು ಪರಿಶೀಲಿಸಿ.

[Turn over

(b) How far do you agree with a distinction between international responsibility of a State and international liability of a State ? Discuss, in the light of the Reports of International Law Commission, the concept of state liability in respect of hazardous activities of states causing damage across state boundaries. Illustrate by referring to judicial decisions.

**7.** Answer any ***two*** of the following :

(a) State A discovers a new island and displays its flag there. Thereafter, State B occupies the island. After a few years, State A desires to recover the island from State B. Advise State B.

(b) Write a note on the function of law in the international community in the background of developments in the sphere of human rights, the environment and the new economic order.

(c) "The increasing role of the United Nations in the progressive development of International law and its codification is felt mainly in frontier areas of International law such as outer space and international sea-bed area." Comment.

**8.** Write short notes on any ***three*** of the following :

(a) S.S. Lotus case and nationality principle in regard to exercise of state jurisdiction.

(b) The International Law Commission, and its role in codifications and progressive development of International law.

(c) Law of flag.

(d) Grund Norm and the Primacy of International Law.

(ಬಿ) ರಾಜ್ಯದ ಅಂತರರಾಷ್ಟ್ರೀಯ ಜವಾಬ್ದಾರಿ ಮತ್ತು ರಾಜ್ಯದ ಅಂತರರಾಷ್ಟ್ರೀಯ ಹೊಣೆಗಾರಿಕೆ ನಡುವೆ ಇರುವ ಭಿನ್ನತೆಯನ್ನು ನೀವು ಎಷ್ಟರಮಟ್ಟಿಗೆ ಒಪ್ಪಿಕೊಳ್ಳುತ್ತೀರಿ ? ರಾಜ್ಯದ ಗಡಿಗಳಗುಂಟ ಹಾನಿಯನ್ನುಂಟುಮಾಡುವ ರಾಜ್ಯಗಳ ಅಪಾಯಕಾರಿ ಚಟುವಟಿಕೆಗಳ ಸಂಬಂಧದಲ್ಲಿ ರಾಜ್ಯದ ಹೊಣೆಗಾರಿಕೆ ಪರಿಕಲ್ಪನೆ ಕುರಿತು ಅಂತರರಾಷ್ಟ್ರೀಯ ಕಾನೂನು ಆಯೋಗದ ವರದಿಗಳ ಹಿನ್ನೆಲೆಯಲ್ಲಿ ಚರ್ಚಿಸಿ. ನ್ಯಾಯಿಕ ನಿರ್ಣಯಗಳನ್ನು ಉಲ್ಲೇಖಿಸುವ ಮೂಲಕ ವಿವರಿಸಿರಿ.

7. ಯಾವುದಾದರೂ **ಎರಡಕ್ಕೆ** ಉತ್ತರಿಸಿ :

(ಎ) 'ಎ' ರಾಜ್ಯವು ಒಂದು ಹೊಸ ನಡುಗಡ್ಡೆಯನ್ನು ಶೋಧಿಸಿ ಅಲ್ಲಿ ತನ್ನ ಧ್ವಜವನ್ನು ಪ್ರದರ್ಶಿಸುತ್ತದೆ. ಆ ತರುವಾಯ 'ಬಿ' ರಾಜ್ಯವು ಆ ನಡುಗಡ್ಡೆಯನ್ನು ವಶಪಡಿಸಿಕೊಳ್ಳುತ್ತದೆ. ಕೆಲವು ವರ್ಷಗಳ ತರುವಾಯ 'ಎ' ರಾಜ್ಯವು 'ಬಿ' ರಾಜ್ಯದಿಂದ ಆ ನಡುಗಡ್ಡೆಯನ್ನು ಹಿಂದಕ್ಕೆ ಪಡೆಯಲು ಇಚ್ಛಿಸುತ್ತದೆ. 'ಬಿ' ರಾಜ್ಯಕ್ಕೆ ಸಲಹೆ ನೀಡಿ.

(ಬಿ) ಮಾನವ ಹಕ್ಕುಗಳು, ಪರಿಸರ ಮತ್ತು ಹೊಸ ಆರ್ಥಿಕ ಸ್ಥಿತಿ ಈ ಕ್ಷೇತ್ರಗಳಲ್ಲಿ ಆದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಸಮುದಾಯದಲ್ಲಿ ಕಾನೂನಿನ ಪ್ರಕಾರ್ಯ ಕುರಿತು ಟಿಪ್ಪಣಿ ಬರೆಯಿರಿ.

(ಸಿ) "ಅಂತರರಾಷ್ಟ್ರೀಯ ಕಾನೂನು ಮತ್ತು ಅದರ ಕ್ರೋಡೀಕರಣದ ಪ್ರಗತಿಪರ ಬೆಳವಣಿಗೆಯಲ್ಲಿ ಸಂಯುಕ್ತರಾಷ್ಟ್ರದ ಹೆಚ್ಚುತ್ತಿರುವ ಪಾತ್ರವು ಹೊರಗಿನ ಪ್ರದೇಶ ಮತ್ತು ಅಂತರರಾಷ್ಟ್ರೀಯ ಸಮುದ್ರ ತಳ (ಸೀ ಬೆಡ್) ಪ್ರದೇಶಗಳಂತಹ ಅಂತರರಾಷ್ಟ್ರೀಯ ಗಡಿನಾಡು ಪ್ರದೇಶಗಳಲ್ಲಿ ಮುಖ್ಯವಾಗಿ ಕಂಡು ಬರುತ್ತಿದೆ." – ವ್ಯಾಖ್ಯಾನಿಸಿ.

8. ಯಾವುದಾದರೂ **ಮೂರರ** ಬಗ್ಗೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ :

(ಎ) ರಾಜ್ಯ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ಎಸ್.ಎಸ್. ಲೋಟಸ್ ಪ್ರಕರಣ ಮತ್ತು ರಾಷ್ಟ್ರೀಯತೆ ತತ್ವ.

(ಬಿ) ಅಂತರರಾಷ್ಟ್ರೀಯ ಕಾನೂನು ಆಯೋಗ ಮತ್ತು ಅಂತರರಾಷ್ಟ್ರೀಯ ಕಾನೂನಿನ ಕ್ರೋಡೀಕರಣ ಮತ್ತು ಪ್ರಗತಿಪರ ಬೆಳವಣಿಗೆಯಲ್ಲಿ ಅದರ ಪಾತ್ರ.

(ಸಿ) ಧ್ವಜ ಕಾನೂನು.

(ಡಿ) ಗ್ರುಂಡ್ ನಾರ್ಮ್ (Grund Norm) ಮತ್ತು ಅಂತರರಾಷ್ಟ್ರೀಯ ಕಾನೂನಿನ ಪ್ರಾಮುಖ್ಯತೆ.

# 1999

## ಕಾನೂನು

## ಪ್ರಶ್ನೆಪತ್ರಿಕೆ 1

ಸಮಯ : 3 ಗಂಟೆಗಳು ] [ ಗರಿಷ್ಠ ಅಂಕಗಳು : 300

*ಸೂಚನೆಗಳು*

ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.

ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಪ್ರವೇಶ ಪತ್ರದಲ್ಲಿ ನಮೂದಿಸದ ಮಾಧ್ಯಮದಲ್ಲಿ ಬರೆದ ಉತ್ತರಗಳಿಗೆ ಅಂಕಗಳನ್ನು ನೀಡಲಾಗುವುದಿಲ್ಲ.

ಅಭ್ಯರ್ಥಿಗಳು ಕಡ್ಡಾಯ ಪ್ರಶ್ನೆಗಳಾದ *1* ಮತ್ತು *5* ನ್ನು ಉತ್ತರಿಸಬೇಕು; ಉಳಿದಂತೆ ಮೂರು ಪ್ರಶ್ನೆಗಳನ್ನು ಉತ್ತರಿಸುವಾಗ ಪ್ರತಿ ವಿಭಾಗದಿಂದ ಕನಿಷ್ಠ ಒಂದು ಪ್ರಶ್ನೆಯನ್ನು ಆಯ್ಕೆ ಮಾಡತಕ್ಕದ್ದು.

ಎಲ್ಲಾ ಪ್ರಶ್ನೆಗಳ ಅಂಕಗಳು ಸಮಾನವಾಗಿರುತ್ತವೆ.

---

ಸೂ : *The English version of the instructions is printed on the front cover of this question paper.*

11/2

# 1999

# LAW

## Paper 2

*Time : 3 Hours ]* *[ Maximum Marks : 300*

### *INSTRUCTIONS*

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt questions 1 and 5 which are compulsory, and any* **three** *of the remaining questions, selecting at least* **one** *question from each Section.*

*All questions carry equal marks.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

[Turn over

## SECTION A

1. Answer any ***three*** of the following (each answer should be in about 200 words) :

   (a) "Culpable Homicide is the genus while murder is its species." — Justify this statement.

   (b) Explain the essentials that constitute the offence of Abduction.

   (c) Explain the rule in Rylands V. Fletcher. What are the exceptions to this rule ?

   (d) "Negligence connotes the complex concept of breach of duty and consequent damage." — Explain.

2. (a) 'Homicide is the killing of one human being by another human being. It is either lawful or unlawful.' — Comment.

   (b) State the general exceptions under the Indian Penal Code. What offences are committed by 'A' in the following cases ?

      (i) A is at work with a hatchet, the head of which flies off and kills a man who is standing by.

      (ii) A enters a house by night which he is legally entitled to enter. Z, in good faith, taking A for a house-breaker attacks A.

3. (a) A son obtained from his mother, who also has power and authority to grant the permission, to drive his father's car. The son wanted the car for his personal use to drop his two girl-friends at their houses. The father, as well as the mother, was not aware of or knew the girls. On the way, due to negligent driving by the son, the car met with an accident and the girls died on the spot. Explain the liability of the father.

## ವಿಭಾಗ A

1. ಈ ಕೆಳಗಿನ ಯಾವುದಾದರೂ ಮೂರನ್ನು ಉತ್ತರಿಸಿ; ಪ್ರತಿಯೊಂದರ ಉತ್ತರ 200 ಪದಗಳನ್ನು ಮೀರದಿರಲಿ :

   (ಎ) "ಅಪರಾಧಿಕ ನರಹತ್ಯೆ ಕುಲ (Genus) ವಾದರೆ ಕೊಲೆ ಅದರ ವಂಶ (Species) ವಾಗಿರುತ್ತದೆ" – ಈ ಹೇಳಿಕೆಯನ್ನು ಸಮರ್ಥಿಸಿ.

   (ಬಿ) ಅಪಹರಣದ ಅಪರಾಧ ಆಗಬೇಕಾದರೆ ಅವಶ್ಯಕ ಅಂಶಗಳನ್ನು ವಿವರಿಸಿರಿ.

   (ಸಿ) ರೈಲ್ಯಾಂಡ್ಸ್ ವಿರುದ್ಧ ಫ್ಲೆಚರ್ ಮೊಕದ್ದಮೆಯಲ್ಲಿನ ನಿಯಮವನ್ನು ವಿವರಿಸಿ. ಈ ನಿಯಮದ ಅಪವಾದಗಳು ಯಾವುವು ?

   (ಡಿ) "ನಿರ್ಲಕ್ಷ್ಯವು, ಕರ್ತವ್ಯದ ಉಲ್ಲಂಘನೆ ಮತ್ತು ತತ್ಪರಿಣಾಮದ ಹಾನಿಯ ಸಂಕೀರ್ಣ (ಕಾಂಪ್ಲೆಕ್ಸ್) ಪರಿಕಲ್ಪನೆ ಉಂಟಾಗುತ್ತದೆ." – ವಿವರಿಸಿ.

2. (ಎ) "ನರಹತ್ಯೆ ಎಂದರೆ ಒಬ್ಬ ವ್ಯಕ್ತಿಯನ್ನು ಮತ್ತೊಬ್ಬ ವ್ಯಕ್ತಿಯು ಕೊಲೆ ಮಾಡುವುದು. ಅದು ಕಾನೂನುಸಮ್ಮತವಾಗಿರಬಹುದು ಅಥವಾ ಕಾನೂನುಬಾಹಿರವಾಗಿರಬಹುದು." – ವ್ಯಾಖ್ಯಾನಿಸಿ.

   (ಬಿ) ಭಾರತ ದಂಡಸಂಹಿತೆಯಲ್ಲಿನ ಸಾಮಾನ್ಯ ಅಪವಾದಗಳನ್ನು ತಿಳಿಸಿ. ಈ ಕೆಳಕಂಡ ಪ್ರಕರಣಗಳಲ್ಲಿ 'ಎ' ನಿಂದ ಉಂಟಾದ ಅಪರಾಧಗಳು ಯಾವುವು ?

      (i) 'ಎ'ಯು ಕೈಕೊಡಲಿಯಿಂದ ಕೆಲಸ ಮಾಡುತ್ತಿದ್ದನು. ಆ ಕೊಡಲಿಯ ತಲೆಯ ಭಾಗ ಕೊಡಲಿಯಿಂದ ಕಳಚಿಹೋಗಿ ಪಕ್ಕದಲ್ಲಿ ನಿಂತಿದ್ದ ಒಬ್ಬ ವ್ಯಕ್ತಿಗೆ ತಗುಲಿ ಆ ವ್ಯಕ್ತಿಯ ಸಾವಿಗೆ ಕಾರಣವಾಯಿತು.

      (ii) 'ಎ'ಯು ತಾನು ಕಾನೂನುಸಮ್ಮತವಾಗಿ ಪ್ರವೇಶಿಸಲು ಹಕ್ಕುಳ್ಳ ಮನೆಗೆ ರಾತ್ರಿ ವೇಳೆ ಪ್ರವೇಶಿಸುತ್ತಾನೆ. 'ಝಡ್'ನು, ಸದ್ಭಾವನೆಯಿಂದ, 'ಎ'ಯನ್ನು ಮನೆಗಳ್ಳನೆಂದು ಭಾವಿಸಿ ಅವನ ಮೇಲೆ ಆಕ್ರಮಣ ಮಾಡುತ್ತಾನೆ.

3. (ಎ) ಒಬ್ಬ ಮಗನು ತನ್ನ ತಂದೆಯ ಕಾರನ್ನು ಓಡಿಸಲು ಅನುಮತಿ ನೀಡುವುದಕ್ಕೆ ಅಧಿಕಾರ ಹೊಂದಿದ್ದ ತನ್ನ ತಾಯಿಯಿಂದ ಅನುಮತಿ ಪಡೆದನು. ಮಗನು ತನ್ನ ಇಬ್ಬರು ಸ್ನೇಹಿತೆಯರನ್ನು (girl-friends) ಅವರ ಮನೆಗಳಿಗೆ ಬಿಟ್ಟು ಬರುವ ವೈಯಕ್ತಿಕ ಉದ್ದೇಶಕ್ಕಾಗಿ ಆ ಕಾರನ್ನು ಉಪಯೋಗಿಸಬಯಸಿದ್ದನು. ತಂದೆ ಅಥವಾ ತಾಯಿಗೆ ಆ ಹುಡುಗಿಯರ ಬಗ್ಗೆ ತಿಳಿದಿರಲಿಲ್ಲ ಅಥವಾ ಪರಿಚಯವಿರಲಿಲ್ಲ. ಮಾರ್ಗಮಧ್ಯದಲ್ಲಿ, ಮಗನು ನಿರ್ಲಕ್ಷ್ಯದಿಂದ ಕಾರು ಓಡಿಸಿದ್ದರಿಂದ ಕಾರು ಅಪಘಾತಕ್ಕೀಡಾಯಿತು ಮತ್ತು ಆ ಹುಡುಗಿಯರು (girl-friends) ಸ್ಥಳದಲ್ಲಿಯೇ ಮೃತರಾದರು. ತಂದೆಯ ಹೊಣೆಗಾರಿಕೆಯನ್ನು ವಿವರಿಸಿ.

[Turn over

(b) Explain in brief whether the Defendant is liable for his action in the following cases :

(i) A solicitor, negligent in not noticing a mistake in the attestation of a will which he was engaged to draw by the testator, resulting in depriving the plaintiff of her legacy on the testator's death.

(ii) The Defendant told the plaintiff to leave the premises in occupation of the plaintiff. When the plaintiff refused, the Defendant collected some of his workmen who mustered round the plaintiff tucking up their sleeves and aprons and threatened to break the plaintiff's neck if he did not leave.

4. (a) Define 'Dowry' under the Dowry Prohibition Act and state the provisions to deal with the offence of Dowry.

(b) Explain the powers of the State Government to impose collective fine under the Protection of Civil Rights Act.

(ಬಿ) ಪ್ರತಿವಾದಿಯು ಈ ಕೆಳಕಂಡ ಪ್ರಕರಣಗಳಲ್ಲಿ ತನ್ನ ಕೃತ್ಯಕ್ಕೆ ಹೊಣೆಗಾರನೇ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.

(i) ಉಯಿಲು ಬರೆಯುವುದಕ್ಕೆ ನಿಯೋಜಿತವಾಗಿದ್ದ ಸಾಲಿಸಿಟರನು ಉಯಿಲನ್ನು ದೃಢೀಕರಿಸುವಲ್ಲಿ ನಿರ್ಲಕ್ಷದಿಂದ ಒಂದು ತಪ್ಪನ್ನು ಗಮನಿಸದೆ ಇದ್ದುದರಿಂದಾಗಿ ಉಯಿಲುದಾರನ ಮರಣಾನಂತರ ವಾದಿಯು ಮರಣಶಾಸನ ಸ್ವತ್ತನ್ನು ಅನುಭವಿಸದಂತಾದಳು.

(ii) ವಾದಿಯ ಅಭಿಯೋಗದಲ್ಲಿದ್ದ ಸ್ಥಳವನ್ನು ಬಿಟ್ಟುಬಿಡುವಂತೆ ವಾದಿಗೆ ಪ್ರತಿವಾದಿ ಹೇಳಿದನು. ವಾದಿಯು ಹಾಗೆ ಮಾಡಲು ತಿರಸ್ಕರಿಸಲು ಪ್ರತಿವಾದಿಯು ತನ್ನ ಕೆಲವು ಕೆಲಸಗಾರರನ್ನು ಒಟ್ಟುಗೂಡಿಸಿದನು. ಆ ಕೆಲಸಗಾರರು ತಮ್ಮ ಅಂಗಿಯ ತೋಳು ಪಟ್ಟಿಗಳನ್ನು ಹಾಗೂ ಏಪ್ರನ್ ಮೇಲಕ್ಕೆ ಏರಿಸುತ್ತ ವಾದಿಯ ಸುತ್ತಲೂ ನಿಂತುಕೊಂಡರು ಮತ್ತು ಸ್ಥಳವನ್ನು ಬಿಟ್ಟು ಹೋಗದಿದ್ದರೆ ಅವನ ಕತ್ತು ಮುರಿಯುವುದಾಗಿ ವಾದಿಗೆ ಬೆದರಿಕೆ ಹಾಕಿದರು.

4. (ಎ) ವಧೂ ವರದಕ್ಷಿಣೆ ಅಧಿನಿಯಮದಡಿ ವಧು ವರದಕ್ಷಿಣೆ ಕುರಿತು ವ್ಯಾಖ್ಯಾನಿಸಿ ಮತ್ತು ವಧು ವರದಕ್ಷಿಣೆ ಅಪರಾಧ ಕುರಿತು ವ್ಯವಹರಿಸುವ ಉಪಬಂಧಗಳನ್ನು ತಿಳಿಸಿ.

(ಬಿ) ಸಿವಿಲ್ ಹಕ್ಕುಗಳ ಸಂರಕ್ಷಣಾ ಅಧಿನಿಯಮದಡಿ ಸಾಮೂಹಿಕ ಜುಲ್ಮಾನೆ ವಿಧಿಸುವ ರಾಜ್ಯ ಸರ್ಕಾರದ ಅಧಿಕಾರಗಳನ್ನು ವಿವರಿಸಿ.

[Turn over

## SECTION B

5. Answer any *three* of the following (each answer should be in about 200 words) :

   (a) Distinguish between Fraud and Misrepresentation.

   (b) Distinguish between Consideration and Object of a contract.

   (c) A minor can in no circumstances be made personally liable though his property may be burdened with liability.

   (d) Define Contingent Contract. State the difference between wagering contract and contract of insurance.

6. (a) 'Mere consideration is not sufficient; it must be lawful.' — Explain the law relating to lawful consideration.

   (b) State the different kinds of quasi contracts in India. Give illustrations.

7. (a) Examine the solutions in which Law of Fiction shall apply in partnership relations. Refer to the relevant provisions of the Partnership Act and case-law.

   (b) Explain the right of the partners *inter se*. Can a partner be expelled from a firm ? What are the consequences of it with regard to his rights and obligations ?

8. (a) In reference to the MRTP Act, 1969 explain the following :

   (i) Appeals

   (ii) Monopolistic trade practices

   (iii) Aims and objects of MRTP Act

   (b) Discuss the controversy in relation to whether deficiency in service and related cases of professional negligence of the medical profession should be covered under the provisions of the Consumer Protection Act.

## ವಿಭಾಗ B

5. ಈ ಕೆಳಗಿನ ಯಾವುದಾದರೂ ಮೂರನ್ನು ಉತ್ತರಿಸಿ; ಪ್ರತಿಯೊಂದರ ಉತ್ತರ 200 ಪದಗಳನ್ನು ಮೀರದಿರಲಿ :

(ಎ) ಮೋಸ ಮತ್ತು ತಪ್ಪು ನಿರೂಪಣೆ ನಡುವಿನ ಭಿನ್ನತೆಯನ್ನು ವಿವರಿಸಿ.

(ಬಿ) ಕರಾರಿನ ಪರಿಗಣತೆ ಹಾಗೂ ಉದ್ದೇಶದ ನಡುವಿನ ಭಿನ್ನತೆ ಬಗ್ಗೆ ತಿಳಿಸಿ.

(ಸಿ) ಯಾವುದೇ ಸಂದರ್ಭದಲ್ಲೂ ಒಬ್ಬ ಅಪ್ರಾಪ್ತ ವಯಸ್ಕನನ್ನು, ಆತನ ಸ್ವತ್ತಿನ ಮೇಲೆ ಹೊಣೆಗಾರಿಕೆಯ ಹೊರೆ ಇದ್ದರೂ, ವೈಯಕ್ತಿಕವಾಗಿ ಹೊಣೆಗಾರನನ್ನಾಗಿ ಮಾಡಲಾಗದು.

(ಡಿ) ಅವಲಂಬಿತ ಕರಾರು ಕುರಿತು ವ್ಯಾಖ್ಯಾನಿಸಿ. ಪಣವೊಡ್ಡುವ ಕರಾರು ಮತ್ತು ವಿಮೆ ಕರಾರು ನಡುವಿನ ವ್ಯತ್ಯಾಸವನ್ನು ತಿಳಿಸಿ.

6. (ಎ) "ಕೇವಲ ಪರಿಗಣತಿ ಸಾಕಷ್ಟಾಗದು; ಅದು ಕಾನೂನುಸಮ್ಮತವಾಗಿರಬೇಕು." – ಕಾನೂನುಸಮ್ಮತ ಪರಿಗಣತಿಗೆ ಸಂಬಂಧಿಸಿದ ಕಾನೂನನ್ನು ವಿವರಿಸಿ.

(ಬಿ) ಭಾರತದಲ್ಲಿರುವ ಕರಾರು ಸದೃಶಗಳ (quasi contracts) ಬೇರೆ ಬೇರೆ ವಿಧಗಳನ್ನು ದೃಷ್ಟಾಂತಗಳ ಮೂಲಕ ವಿವರಿಸಿರಿ.

7. (ಎ) ಪಾಲುದಾರಿಕೆ ಸಂಬಂಧಗಳಲ್ಲಿ ಕಲ್ಪನೆ ಕಾನೂನು (Law of Fiction) ಅನ್ವಯವಾಗುವ ಪ್ರಕರಣಗಳಲ್ಲಿ ಪರಿಹಾರಗಳನ್ನು ಪರಿಶೀಲಿಸಿ. ಪಾಲುದಾರಿಕೆ ಅಧಿನಿಯಮಕ್ಕೆ ಸಂಬಂಧಪಟ್ಟ ಉಪಬಂಧಗಳನ್ನು ಮತ್ತು ವಿವಿಧ ನ್ಯಾಯಾಲಯಗಳ ನಿರ್ಣೀತ ಕಾನೂನುಗಳನ್ನು ಉಲ್ಲೇಖಿಸಿ.

(ಬಿ) ಪಾಲುದಾರರ ಪರಸ್ಪರ ಹಕ್ಕುಗಳನ್ನು ವಿವರಿಸಿ. ಒಬ್ಬ ಪಾಲುದಾರನನ್ನು ಒಂದು ಫರ್ಮಿನಿಂದ ಹೊರಹಾಕಬಹುದೆ ? ಆತನ ಹಕ್ಕುಗಳು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ಅದರ ಪರಿಣಾಮಗಳೇನು ?

8. (ಎ) ಎಂ.ಆರ್.ಟಿ.ಪಿ. ಅಧಿನಿಯಮ, 1969 ಕ್ಕೆ ಸಂಬಂಧಿಸಿದಂತೆ ಈ ಮುಂದಿನವುಗಳನ್ನು ವಿವರಿಸಿ :

(i) ಅಪೀಲುಗಳು

(ii) ಏಕಸ್ವಾಮ್ಯ ಟ್ರೇಡ್ ಪದ್ಧತಿ (Monopolistic trade practices)

(iii) ಎಂ.ಆರ್.ಟಿ.ಪಿ. ಅಧಿನಿಯಮದ ಗುರಿಗಳು ಮತ್ತು ಉದ್ದೇಶಗಳು

(ಬಿ) ವೈದ್ಯಕೀಯ ವೃತ್ತಿಗೆ ಸಂಬಂಧಿಸಿದಂತೆ ಸೇವೆಯಲ್ಲಿನ ಕೊರತೆ ಮತ್ತು ತತ್ಸಂಬಂಧಿ ವೃತ್ತಿ ನಿರ್ಲಕ್ಷ್ಯವನ್ನು ಗ್ರಾಹಕ ಸಂರಕ್ಷಣಾ ಅಧಿನಿಯಮದ ಉಪಬಂಧಗಳಡಿ ಸೇರಿಸಬೇಕೆ ಎಂಬ ವಿವಾದ ಕುರಿತು ಚರ್ಚಿಸಿ.